# ಸುದ್ದಿ

**ಪೋಸ್ಟ್‌ಮನ್ ರಾಯಪ್ಪ, ಮೂಳಪ್ಪ ಶ್ಯಾನುಭೋಗರು ಸತ್ತ ಸುದ್ದಿ ತಂದ. ಆದರೆ ಸೀತಕ್ಕ ಕಂಡದ್ದು...?**

● ಸುಂದರ ನಾಡಕರ್ಣಿ

ಪೋಸ್ಟ್ ಆಫೀಸು ಅಂದು ಊರಿಗೆಲ್ಲ ಒಂದು ಸುದ್ದಿ ಕೇಂದ್ರವಾಗಿತ್ತು. ಆಗಿನ್ನೂ ನಮ್ಮೂರಿಗೆ ಟಪಾಲು ಬಸ್ಸಿನಲ್ಲಿ ಬರುತ್ತಿದ್ದಿಲ್ಲ, ಮೂರು ಮೈಲಿನ ಗೋಕರ್ಣದಿಂದ ರನ್ನರ್ ರಾಯಪ್ಪ ಅದನ್ನು ಹೊತ್ತು ನಮ್ಮೂರಿಗೆ ತರುತ್ತಿದ್ದ. ಇಳಿವಯಸ್ಸಿನ ಹಪ್ಪು ಮುದುಕ ಅವನು. ಮೂರು ಮೈಲು ದೂರದಿಂದ ಆಲದ ಕೆರೆಯ 'ಗಟ್ಟಿಗೆ', ಇಗರ್ಜಿಯ ಮೇಲಿನ ಗಟ್ಟಿಗೆಗಳನ್ನೇರಿ ಇಳಿದು ಜೋಕಾಲಿ ಹೊಡೆಯುತ್ತ ಬೆನ್ನಿನ ಮೇಲೆ ಚೀಲ ಹೊತ್ತು ತಂದರೇನೇ ಸರಿ– ಹೊತ್ತು ಯಾರು ಕೇಳಬೇಕು? ತರುತ್ತಾನಲ್ಲ, ಅದೇ ದೊಡ್ಡದು. ಊರವರಿಗೇನು ಅಷ್ಟು ತರಾತುರಿ; ಬಂದರೆ– ಸಾಲೆಗಳಲ್ಲಿ ಸರ್ಕ್ಯುಲರ್, ಸೊನ್ನಾರ ಹೆಂಗಸರಿಗೆ ಮನಿಯಾರ್ಡರು, ಸಾಲಾ ಮಾಸ್ತರರಿಗೆ ವರ್ಗಾ ವರ್ಗಿ ಆರ್ಡರು, 'ಸಂಯುಕ್ತ ಕರ್ನಾಟಕ'ದ 'ಕರ್ಮವೀರ'ದ ಏಜೆಂಟರ ಹೆಸರಿಗೆ ಹಣಕ್ಕಾಗಿ ಬರುವ ರಿಮ್ಯಾಂಡರು– ಇವೇ ಮುಂತಾದ ಮಾಮೂಲಿ ಕಾಗದ ಪತ್ರಗಳು. ಅವು ಒಂದು ತಾಸು ತಡಮಾಡಿ ಬಂದರೇನು, ಎರಡು ತಾಸು ಮೀರಿದರೇನು? ಹೀಗಾಗಿ ರಾಯಪ್ಪನ ಅನಿಯಮಿತ ಆಗಮನ ನಮ್ಮ ಜನಕ್ಕೆ ರೂಢಿಯಾಗಿ ಹೋಗಿತ್ತು. ಅಷ್ಟರಲ್ಲಿಯೇ ಯಾರಾದರೂ ತಪ್ಪಿ ತಡಮಾಡಿ ಬರುತ್ತಿರುವ ಕಾರಣ ಕೇಳಿದರೆ 'ಅದೇನು ಎರ್ಡು ಹಳಿಗಳ ಮೇಲೆ ಓಡುವ ರೇಲುಗಾಡಿ ಎಂದು